# ಮುಖ್ಯ ಚುನಾವಣಾಧಿಕಾರಿಗಳ ಕಛೇರಿ, ಕರ್ನಾಟಕ

ನಿರ್ವಾಚನ ನಿಲಯ,ಶೇಷಾದ್ರಿ ರಸ್ತೆ, ಬೆಂಗಳೂರು-560 001.
ದೂರವಾಣಿ- 080-22224212

ಚುನಾವಣಾ ಪರ್ವ ದೇಶದ ಗರ್ವ
ಲೋಕಸಭಾ ಚುನಾವಣೆ 2024

**ಸಂಖ್ಯೆ.** DPAR 07 CHULOSA (MC) 2024 **ದಿನಾಂಕ:** 21.04.2024

## ಸಾರ್ವತ್ರಿಕ ಲೋಕಸಭಾ ಚುನಾವಣೆ-2024
## ಮತ್ತು ಉಪ ಚುನಾವಣೆ 36-ಸುರಪುರ ವಿಧಾನಸಭಾ ಕ್ಷೇತ್ರ-2024
## ಪತ್ರಿಕಾ ಪ್ರಕಟಣೆ

### 1. ಚುನಾವಣಾ ವೆಚ್ಚದ ಮೇಲ್ವಿಚಾರಣೆ :

**ಜಪ್ತಿ:**

*Value Rs. In Crore*

| ಜಪ್ತಿ ಮಾಡಲಾದ ವಸ್ತುಗಳು | | | ಪೊಲೀಸ್/ ಕ್ಷಿಪ್ರ ಪಡೆಗಳು (FST)/ ಸ್ಥಿರ ಕಣ್ಗಾವಲು ತಂಡಗಳು(SST)/ | | ಅಬಕಾರಿ | | ಆದಾಯ ತೆರಿಗೆ | | ವಾಣಿಜ್ಯ ತೆರಿಗೆ | | ಒಟ್ಟು ಮೊತ್ತ | |
|---|---|---|---|---|---|---|---|---|---|---|---|---|
| | | | ಹಿಂದಿನ ದಿನದಂದು | ಪ್ರಾರಂಭದಿಂದ | ಹಿಂದಿನ ದಿನದಂದು | ಪ್ರಾರಂಭದಿಂದ | ಹಿಂದಿನ ದಿನದಂದು | ಪ್ರಾರಂಭದಿಂದ | ಹಿಂದಿನ ದಿನದಂದು | ಪ್ರಾರಂಭದಿಂದ | ಹಿಂದಿನ ದಿನದಂದು | ಪ್ರಾರಂಭದಿಂದ |
| ನಗದು | | ಮೌಲ್ಯ | 0.16 | 62.73 | - | - | - | 12.75 | - | - | 0.16 | 75.47 |
| ಮದ್ಯ | | Qty (in lakhs ltrs) | 0.0047 | 0.17 | 0.08 | 146.55 | - | - | - | - | 0.09 | 146.72 |
| | | ಮೌಲ್ಯ | 0.02 | 0.75 | 0.30 | 176.59 | - | - | - | - | 0.33 | 177.34 |
| ಡ್ರಗ್ಸ್ | | Qty (KGs) | 8.27 | 453.99 | 0.02 | 71.75 | - | - | - | - | 8.28 | 525.74 |
| | | ಮೌಲ್ಯ | 0.50 | 10.95 | 0.0075 | 0.28 | - | - | - | - | 0.51 | 11.23 |
| ಅಮೂಲ್ಯ ಲೋಹ | ಚಿನ್ನ | Qty (KGs) | - | 70.55 | - | - | - | 1.62 | - | 36.31 | - | 108.48 |
| | | ಮೌಲ್ಯ | - | 43.20 | - | - | - | 0.96 | - | 13.51 | - | 57.67 |
| | ಬೆಳ್ಳಿ | Qty (KGs) | - | 294.30 | - | - | - | - | - | 7.59 | - | 301.89 |
| | | ಮೌಲ್ಯ | - | 1.12 | - | - | - | - | - | 0.06 | - | 1.18 |
| | ವಜ್ರ | Qty (carat) | - | - | - | - | - | 4.23 | - | - | - | 4.23 |
| | | ಮೌಲ್ಯ | - | - | - | - | - | 0.09 | - | - | - | 0.09 |
| ಉಚಿತ ಉಡುಗೊರೆ | | ಮೌಲ್ಯ | - | 2.18 | - | - | - | - | 0.0086 | 5.96 | 0.01 | 8.14 |
| ಇತರೆ | | ಮೌಲ್ಯ | - | 11.94 | - | 0.03 | - | - | - | 60.31 | - | 72.27 |
| ಒಟ್ಟು ಮೊತ್ತ | | | **0.69** | **132.86** | **0.31** | **176.90** | **-** | **13.80** | **0.01** | **79.84** | **1.01** | **403.40** |

### 2. ದಾಖಲಾದ ಪ್ರಕರಣಗಳ ಕುರಿತು ಮಾಹಿತಿ:

a. ಕ್ಷಿಪ್ರಪಡೆಗಳು (**FS**), ಸ್ಥಿರ ಕಣ್ಗಾವಲು ತಂಡಗಳು (**SST**) ಮತ್ತು ಪೊಲೀಸ್ ಅಧಿಕಾರಿಗಳು ನಗದು, ಮದ್ಯ, ಡ್ರಗ್ಸ್, ಬೆಲೆಬಾಳುವ ಲೋಹ ಮತ್ತು ಉಚಿತ ಉಡುಗೊರೆ (**Freebies**) ವಶಪಡಿಸಿಕೊಂಡ ಪ್ರಕರಣಗಳಿಗೆ ಸಂಬಂಧಿಸಿದಂತೆ **1,975** ಎಫ್ಐಆರ್‌ಗಳನ್ನು ದಾಖಲಿಸಿದ್ದಾರೆ.

b. ಅಬಕಾರಿ ಇಲಾಖೆ ಘೋರ ಅಪರಾಧ ಅಡಿಯಲ್ಲಿ **2,781** ಪ್ರಕರಣಗಳನ್ನು ದಾಖಲಿಸಿದೆ**,** ಪರವಾನಗಿ ಉಲ್ಲಂಘನೆ ಅಡಿಯಲ್ಲಿ **4,155** ಪ್ರಕರಣ ದಾಖಲಿಸಿದೆ. NDPS ಅಡಿಯಲ್ಲಿ **162** ಪ್ರಕರಣಗಳನ್ನು ಮತ್ತು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಸೆಕ್ಷನ್ 15(a) ಅಡಿಯಲ್ಲಿ **23,522** ಪ್ರಕರಣಗಳನ್ನು ದಾಖಲಿಸಿದೆ, ಮತ್ತು **1,739** ವಿವಿಧ ರೀತಿಯ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

3. **ವಿಶೇಷ ವರದಿಗಳು:**
ಬೈಯಪ್ಪನಹಳ್ಳಿ ಪೊಲೀಸ್ ಠಾಣೆ ತಂಡದವರು ರೂ.**46,25,000/-** ಮೌಲ್ಯದ **185grms** cocaine, ಮತ್ತು ರೂ.**3,27,000/-** ಮೌಲ್ಯದ **45grms** Ecstasy Tablets, ಒಟ್ಟು ಮೊತ್ತ ರೂ.**49,52,000/-** , ಸಿ.ವಿ.ರಾಮನ್ ನಗರ, ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರ, ಬೆಂಗಳೂರು ನಗರ ಜಿಲ್ಲೆ, ಇಲ್ಲಿ ವಶಪಡಿಸಿಕೊಂಡಿದ್ದಾರೆ.

4. **ಸಾರ್ವಜನಿಕ ಕುಂದು ಕೊರತೆ ಪರಿಹಾರ:**
ಮತದಾರರ ಸಹಾಯವಾಣಿಯ ಮೂಲಕ ಸ್ವೀಕರಿಸಿದ **25,164** ಕರೆಗಳ ಪೈಕಿ **24,930** ಜನರ ಮಾಹಿತಿಯನ್ನು ಕೋರಿದ್ದಾರೆ, **31** ನಾಗರೀಕರು ಪ್ರತಿಕ್ರಿಯೆ ನೀಡಿದ್ದಾರೆ, **27** ಮತದಾರರು ಸಲಹೆಗಳನ್ನು ನೀಡಿದ್ದಾರೆ ಮತ್ತು **176** ನಾಗರೀಕರು ದೂರುಗಳನ್ನು ದಾಖಲಿಸಿದ್ದಾರೆ. ಒಟ್ಟು **25,164** ಕರೆಗಳನ್ನು ವಿಲೇವಾರಿ ಮಾಡಲಾಗಿದೆ. ಹೆಚ್ಚುವರಿಯಾಗಿ NGRS ಪೋರ್ಟಲ್‌ನಲ್ಲಿ **15,340** ನಾಗರೀಕರಿಂದ ದೂರುಗಳನ್ನು ದಾಖಲಿಸಲಾಗಿದೆ, ಅದರಲ್ಲಿ **14,972** ದೂರುಗಳನ್ನು ವಿಲೇವಾರಿ ಮಾಡಲಾಗಿದೆ.

5. **ಸಿವಿಜಿಲ್(cVIGIL):**
cVIGIL ಅಪ್ಲಿಕೇಶನ್ ಮೂಲಕ **26,369** ದೂರುಗಳನ್ನು ಸ್ವೀಕರಿಸಲಾಗಿದೆ. ಸ್ವೀಕರಿಸಿದ ಪ್ರಮುಖ **15,616** ದೂರುಗಳು ಅನುಮತಿಯಿಲ್ಲದ ಪೋಸ್ಟರ್‌ಗಳು/ಬ್ಯಾನರ್‌ಗಳಿಗೆ ಸಂಬಂಧಿಸಿವೆ, **1,117** ಕಡ್ಡಾಯ ಘೋಷಣೆ ಇಲ್ಲದ ಪೋಸ್ಟರ್‌ಗಳು, ಆಸ್ತಿ ವಿರೂಪಗೊಳಿಸುವಿಕೆ **326,** ಹಣವಿತರಣೆ **186**, ಉಡುಗೊರೆಗಳು/ಕೂಪನ್‌ಗಳ ವಿತರಣೆ **128,** ನಿಷೇಧದ ಅವಧಿಯಲ್ಲಿ ಪ್ರಚಾರ **53**, ಮದ್ಯಹಂಚಿಕೆ **147,** ಅನುಮತಿಯಿಲ್ಲದೆ ವಾಹನ ಬೆಂಗಾವಲು **92**, ಧಾರ್ಮಿಕ ಅಥವಾ ಸಮುದಾಯಿಕ ಭಾಷಣಗಳು/ಸಂದೇಶಗಳು **60,** ಬಂದೂಕುಗಳ ಪ್ರದರ್ಶನ ಬೆದರಿಕೆ **42,** ಇತರೆ **24,886** ಇವುಗಳಲ್ಲಿ ದೂರುಗಳು ಸರಿಯಾಗಿವೆ ಎಂದು ಕಂಡುಹಿಡಿದು ಸೂಕ್ತಕ್ರಮ ಕೈಗೊಳ್ಳಲಾಗಿದೆ.

6. **ಮಾಧ್ಯಮ(Media):**
ಇಮೇಲ್ ಮೂಲಕ ಸ್ವೀಕರಿಸಿದ **236** ದೂರುಗಳು ಮತ್ತು ಪತ್ರಗಳ ಮೂಲಕ ಸ್ವೀಕರಿಸಿದ **697** ದೂರುಗಳು ಸುದ್ದಿ ಪತ್ರಿಕೆಗಳು ಮೂಲಕ ಸ್ವೀಕರಿಸಿದ **32** ದೂರುಗಳು, ಟಿವಿ ಚಾನೆಲ್‌ಗಳ ಮೂಲಕ ಸ್ವೀಕರಿಸಿದ **41** ದೂರುಗಳು ಮತ್ತು ಸಾಮಾಜಿಕ ಜಾಲತಾಣ ಮಾಧ್ಯಮ ಮೂಲಕ ಸ್ವೀಕರಿಸಿದ **64** ದೂರುಗಳು ಹೀಗೆ ಒಟ್ಟು ಸ್ವೀಕರಿಸಿದ **1,070** ದೂರುಗಳ ಪೈಕಿ **1,070** ದೂರುಗಳನ್ನು ವಿಲೇವಾರಿ ಮಾಡಲಾಗಿದೆ

7. **ಸುವಿಧಾ(SUVIDHA):**
ಸುವಿಧಾ ಅಡಿಯಲ್ಲಿ ಅನುಮತಿಗಳಿಗಾಗಿ, **7,856** ಅರ್ಜಿಗಳು ಸ್ವೀಕರಿಸಲಾಗಿದೆ, ಅದರಲ್ಲಿ **6,139** ಅರ್ಜಿಗಳನ್ನು ಅಂಗೀಕರಿಸಲಾಗಿದೆ ಮತ್ತು **1,136** ಅರ್ಜಿಗಳನ್ನು ತಿರಸ್ಕರಿಸಲಾಗಿದೆ. **28** ಅರ್ಜಿಗಳು ಪ್ರಗತಿಯಲ್ಲಿದೆ. **248** ಅರ್ಜಿಗಳು ಬಾಕಿ ಉಳಿದಿವೆ ಮತ್ತು **305** ಅರ್ಜಿಗಳನ್ನು ರದ್ದುಗೊಳಿಸಲಾಗಿದೆ.

8. **ದಾಖಲಾದ ಪ್ರಕರಣಗಳ ಕುರಿತು ಮಾಹಿತಿ:**
ಬೆಂಗಳೂರು ನಗರದ ಬಿನ್ನಿ ಮಿಲ್ ಹತ್ತಿರದ ಎ.ಪಿ.ಎಂ.ಸಿ ಬಳಿ ಇರುವ ಸ್ಥಿರ ಕಣ್ಗಾವಲು ಪಡೆಯ ಚೆಕ್ ಪೋಸ್ಟ್‌ನಲ್ಲಿ ದಿನಾಂಕ 20.04.2024ರಂದು ಕಾರಿನಲ್ಲಿ ಸಾಗಿಸುತ್ತಿದ್ದ ಸೂಕ್ತ ದಾಖಲೆ ಇಲ್ಲದ 2 ಕೋಟಿ ನಗದು ಹಣವನ್ನು ವಶಪಡಿಸಿಕೊಳ್ಳಲಾಗಿದೆ. ಪ್ರಾಥಮಿಕ ತನಿಖೆಯಲ್ಲಿ ಸದರಿ ಹಣ ರಾಜ್ಯ ಬಿಜೆಪಿ ಪಕ್ಷದ ಕಚೇರಿಗೆ ಸಂಬಂಧಿಸಿದ್ದು ಎಂದು ತಿಳಿದು ಬಂದಿದ್ದು, ಪಕ್ಷದ ಹಣ ಎನ್ನುವ ಹಿನ್ನಲೆಯಲ್ಲಿ ಈ ಕುರಿತು ಆದಾಯ ತೆರಿಗೆ ಇಲಾಖೆ ಸದರಿಯವರು ಆದಾಯ ತೆರಿಗೆ ಕಾಯ್ದೆಯ ಅನ್ವಯ ಸದರಿ ಹಣವನ್ನು ಸ್ವೀಕರಿಸಲು ಬರುವುದಿಲ್ಲವೆಂದು ಹಿಂಬರಹ ನೀಡಿರುತ್ತಾರೆ. ಈ ಹಿನ್ನಲೆಯಲ್ಲಿ ರಾಜ್ಯ ಬಿಜೆಪಿ ಸೆಕ್ರಟರಿ ಲೋಕೇಶ್ ಅಂಬೆಕಲ್ಲು, ವಾಹನ ಚಲಾಯಿಸುತ್ತಿದ್ದ ವೆಂಕಟೇಶ್ ಪ್ರಸಾದ್ ಹಾಗೂ ಸಹ ಪ್ರಯಾಣಿಕ ಗಂಗಾಧರ್ ಇವರುಗಳ ಮೇಲೆ IPC Section 1860 (U/s-171E, 171F, 171B, 171C); Representation of People Act 1950, 1951 & 1989 (U/s-123) ರಡಿಯಲ್ಲಿ FIR ದಾಖಲಿಸಲಾಗಿದೆ.

***